ವಿಷಯ :- ಮಲಪ್ರಭ, ಘಟಪ್ರಭ ಅಚ್ಚುಕಟ್ಟು ಪ್ರದೇಶದಲ್ಲಿ ಅಭಿವೃದ್ಧಿ ಕೇಂದ್ರಿಕ ನೌಕರರ ಸಂಬಳ ಹೆಚ್ಚಾಗಿ ಖರ್ಚಾದ ಬಗ್ಗೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 427(745)

ಶ್ರೀ ಶಿವಾನಂದ .ಹೆಚ್.ಕೌಜಲಗಿ (ಬೈಲಹೊಂಗಲ) :- ಮಾನ್ಯ ಯೋಜನಾ ಮತ್ತು ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1993-94ರ ಸಾಲಿನಲ್ಲಿ ಮಲಪ್ರಭ ಅಚ್ಚುಕಟ್ಟು ಪ್ರದೇಶದಲ್ಲಿ ಅಭಿವೃದ್ಧಿ ಕೆಲಸಗಳಿಗಿಂತ ನೌಕರರ ಹಾಗೂ ಇತರ ಖರ್ಚು ಹೆಚ್ಚಿಗೆ ಆಗಿರುವುದು ನಿಜವೇ ?

ಆ) ಅಭಿವೃದ್ಧಿ ಸಲುವಾಗಿ (ಕಾಡಾ ಕೆಲಸಗಳು) ನೌಕರರ ಸಂಬಳ ಸಲುವಾಗಿ ಮತ್ತು ಇತರ ವೆಚ್ಚ ಹಾಗೂ ಎಷ್ಟು ಹಣ ಖರ್ಚಾಗಿರುವುದು ? (ಪ್ರತ್ಯೇಕ ವಿವರ ನೀಡುವುದು)

ಇ) ಕಾಡಾ ಕೆಲಸಗಳಿಗೆ ಸರ್ಕಾರದವರು 1993-94ನೇ ಸಾಲಿನಲ್ಲಿ ಎಷ್ಟು ಹಣ ಬಿಡುಗಡೆ ಮಾಡಿರುವರು ಮತ್ತು ಎಷ್ಟು ಹಣ ಖರ್ಚಾಗಿರುವುದು ?

ಈ) ಬೈಲಹೊಂಗಲ ಹಾಗೂ ಸವದತ್ತಿ ತಾಲ್ಲೂಕಿನಲ್ಲಿ 1993-94ನೇ ಸಾಲಿನಲ್ಲಿ ಯಾವ ಯಾವ ಕೆಲಸಗಳನ್ನು ತೆಗೆದುಕೊಳ್ಳಲಾಗಿತ್ತು ಮತ್ತು ಯಾವ ಯಾವ ಕೆಲಸಗಳನ್ನು ಮಾಡಿ ಮುಗಿಸಲಾಗಿದೆ ?

ಶ್ರೀ. ಕೆ. ಹೆಚ್. ಹನುಮೇಗೌಡ (ಯೋಜನಾ ಮತ್ತು ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಮಂತ್ರಿಗಳು) :-

ಅ) 1993-94ನೇ ಸಾಲಿನಲ್ಲಿ ಮಲಪ್ರಭ ಮತ್ತು ಘಟಪ್ರಭ ಅಚ್ಚುಕಟ್ಟು ಪ್ರದೇಶದಲ್ಲಿ ಅಭಿವೃದ್ಧಿ ಕೆಲಸಗಳಿಗಿಂತ ನೌಕರರ ಹಾಗೂ ಇತರ ಖರ್ಚು ಹೆಚ್ಚಿಗೆ ಆಗಿದೆ ಎಂಬ ಅಂಶವು ನಿಜವಲ್ಲ.

ಆ) 1993-94ನೇ ಸಾಲಿನಲ್ಲಿ ಮಲಪ್ರಭ ಮತ್ತು ಘಟಪ್ರಭ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರವು ವಿವಿಧ ಅಭಿವೃದ್ಧಿ ಕೆಲಸಗಳಿಗಾಗಿ ಹಾಗೂ ಸಿಬ್ಬಂದಿಯವರಿಗಾಗಿ ಮಾಡಿದ ವಿವರಗಳು ಈ ಕೆಳಗಿನಂತೆ ಇರುತ್ತದೆ.

(ರೂ. ಲಕ್ಷಗಳಲ್ಲಿ)

1) ಸಾಮಾನ್ಯ ಆಡಳಿತ		252-03
ಅ) ಸಿಬ್ಬಂದಿಯ ವೇತನ	183,82,273	
ಆ) ಕಚೇರಿ ವೆಚ್ಚ	68,21,234	
	252,03,507	

2)	ಹೊಲಗಾಲುವೆಗಳ ನಿರ್ಮಾಣ	89-66
3)	ಚಿಕ್ಕ ಮತ್ತು ಅತೀ ಚಿಕ್ಕ ರೈತರಿಗೆ ಧನಸಹಾಯ	0.364
4)	ವಾರಾಬಂದಿ	16-990
5)	ಸರಿಪಡಿಸುವ ಪ್ರಯೋಗಗಳು	14-584
6)	ಯೋಜನಾ ಅಧ್ಯಯನ	5.250
7)	ರೈತರ ಸಹಭಾಗ ಹಾಗೂ ಮೇಲ್ವಿಚಾರಣೆ ಅಧ್ಯಯನ	6743
8)	ಗೋದಾಮುಗಳ ನಿರ್ಮಾಣ	2-000
9)	ಆಯಕಟ್ಟು ರಸ್ತೆಗಳ ನಿರ್ಮಾಣ	25.375
10)	ವಸತಿ ಹಾಗೂ ಕಚೇರಿ ಕಟ್ಟಡಗಳ ನಿರ್ಮಾಣ	7-297
11)	ವಿಶೇಷ ಘಟಕ ಯೋಜನೆ	
	ಅ) ಸಹಕಾರ ಸಂಘಗಳಿಗೆ ಸದಸ್ಯರ ನೇಮಕಾತಿ	0.722
	ಆ) ಬೋರವೆಲ್ಲಗಳ ನಿರ್ಮಾಣ	70-021
	ಇ) ತುಂತುರ ನೀರಾವರಿ	55-264
	ಈ) ಕೃಷಿ ಉಪಕರಣಗಳ ಖರೀದಿ	5-146
12)	ಇತರ ಪಿಕಪ್ಸ್ ಮತ್ತು ಬಂದಾರಾ	0-040
13)	ಅರಣ್ಯೀಕರಣ	12-680
14)	2515 ಎಸ್.ಎಫ್.ಪಿ,ಸಿ, ಮತ್ತು ರೂರಲ್ ಡೆವಲಪ್‌ಮೆಂಟ	2-301
	ಒಟ್ಟು	566-467

ಇ) **ಖರ್ಚಿನ ಘೋಷ್ವಾರ** (ರೂ. ಲಕ್ಷಗಳಲ್ಲಿ)

ವರ್ಷ	ಸಿಬ್ಬಂದಿಗಾಗಿ ಮಾಡಿದ ಖರ್ಚು	ಅಭಿವೃದ್ಧಿ ಕೆಲಸಗಳಿಗಾಗಿ ಮಾಡಿದ ಖರ್ಚು	ಒಟ್ಟು ಖರ್ಚು
1993-94	252-03	314-437	566-467

1993-94ನೇ ಸಾಲಿನಲ್ಲಿ ಕಾಡಾ ಕೆಲಸಗಳಿಗೆ ಸರ್ಕಾರದವರು ಬಿಡುಗಡೆ ಮಾಡಿದ ಹಣ ಮತ್ತು ಕಾಡಾ ಪ್ರಾಧಿಕಾರದಿಂದ ಖರ್ಚು ಮಾಡಿದ ವಿವರ ಈ ಕೆಳಗಿನಂತೆ ಇರುತ್ತದೆ.

(ರೂ. ಲಕ್ಷಗಳಲ್ಲಿ)

1) 1993-94ನೇ ಸಾಲಿನಲ್ಲಿ ಪಡೆದುಕೊಂಡ ಹಣ	365-15
ಎಲ್.ಒ.ಸಿ. ಉಪಯೋಗಿಸದೇ ಮರು ಸಂದಾಯ ಮಾಡಿದ್ದು (-)	30-00
	330-15
2) 1993-94ನೇ ಸಾಲಿನಲ್ಲಿ ಒಟ್ಟು ಖರ್ಚಾದ ಹಣ	566-467

(1992-93ನೇ ಸಾಲಿನ ಅಂದರೆ 31-3-93ರ ಅಂತ್ಯಕ್ಕೆ ಪಿ.ಡಿ. ಆಕೌಂಟ್ ಖಾತೆಯಲ್ಲಿ ಬಾಕಿ ಉಳಿದಿರುವ ಹಣವನ್ನು 1993-94ನೇ ಸಾಲಿನಲ್ಲಿ ಉಪಯೋಗಿಸಲಾಗಿದೆ.)

ಈ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬರುವಂತಹ ಸವದತ್ತಿ,ಹಾಗೂ ಬೈಲಹೊಂಗಲತಾಲೂಕುಗಳಲ್ಲಿ 1993-94ನೇ ಸಾಲಿನಲ್ಲಿ ತೆಗೆದುಕೊಂಡ ಅಭಿವೃದ್ಧಿ ಕೆಲಸಗಳ ಮತ್ತುಮಾಡಿ ಮುಗಿಸಿದ ಅಭಿವೃದ್ಧಿ ಕೆಲಸಗಳ ವಿವರ ಈ ಕೆಳಗಿನಂತೆ ಇರುತ್ತದೆ.

(ತಾಲೂಕವಾರ)

ಅ.ನಂ. ತೆಗೆದುಕೊಂಡ ಕೆಲಸಗಳ ವಿವರಗಳು		ತೆಗೆದುಕೊಂಡದ್ದು		ಮಾಡಿ ಮುಗಿಸಿದ ಕೆಲಸಗಳು		
		ಸವದತ್ತಿ	ಬೈಲಹೊಂಗಲ	ಸವದತ್ತಿ	ಬೈಲಹೊಂಗಲ	ಶರಾ
1	2	2ಅ	2ಬ	3ಅ	3ಬ	4
		1) ಕೃಷಿ ವಿಭಾಗ				
1) ಅಳವಡಿಕೆ ಪ್ರಯೋಗಗಳು						
ಅ) ಪ್ರಯೋಗಗಳು	ಸಂಖ್ಯೆ	3	1	3	1	
ಬ) ನೀರಾವರಿ ಸಹಕಾರಿ ಸಂಘಗಳಿಗೆ ಒಕ್ಕುವ ಯಂತ್ರಗಳ ಪೂರೈಕೆ	ಸಂಖ್ಯೆ	2	1	2	1	
ಕ) ರೈತರಿಗೆ ನೀರಾವರಿ ಕೃಷಿಯಲ್ಲಿ ತಾಂತ್ರಿಕ ತರಬೇತಿ.	ಸಂಖ್ಯೆ	34	6	34	6	
2) ಸಮಗ್ರ ಭೂ ಅಭಿವೃದ್ಧಿ ಕಾರ್ಯಕ್ರಮ (ಕ್ಷೇತ್ರ ಹೆಕ್ಟೇರ್)		800	200	665	88	
3) ಅರಣ್ಯೀಕರಣ ಕಾರ್ಯಕ್ರಮ (ಅರಣ್ಯ ಸಸಿಗಳ ಪೂರೈಕೆ)						
ಅ) ಕ್ಯಾಜುರಿನಾ	ಸಂಖ್ಯೆ	600000	100000	600000	100000	
ಬ) ಸಾಗವಾನಿ	ಸಂಖ್ಯೆ	8000	2000	8000	2000	

4) ವಿಶೇಷ ಘಟಕ ಯೋಜನೆ					
ಅ) ಸ್ವೇಪಂಪುಗಳ ಪೂರೈಕೆ	ಸಂಖ್ಯೆ	50	10	50	10
ಬ) ನೇಗಿಲುಗಳ ಪೂರೈಕೆ	ಸಂಖ್ಯೆ	30	5	30	5
ಕ) ತುಂತುರು ನೀರಾವರಿ ಘಟಕಗಳ ಪೂರೈಕೆ	ಸಂಖ್ಯೆ	70	10	70	10
2) ಅಂತರ್ಜಲ ಅನ್ವೇಷಣಾ ವಿಭಾಗ					
1) ವಿಶೇಷ ಘಟಕ ಯೋಜನೆ					
ಅ) ಕೊಳವೆ ಬಾವಿಗಳನ್ನು ತೊಡಿಸಿದ್ದು	ಸಂಖ್ಯೆ	11	–	11	–
3) ತಾಂತ್ರಿಕ ವಿಭಾಗ		**(ಅ) ವಿಶ್ವಆಹಾರ ಯೋಜನೆ ಅಡಿಯಲ್ಲಿ**			
1) ಸಿಂಗಾರಕೊಪ್ಪದಿಂದ ಅಸುಂಡಿ ರಸ್ತೆ ನಿರ್ಮಾಣ (4 ಕಿಮಿ, 7 ಸಿ.ಡಿ.ಗಳು: 6.00 ಲಕ್ಷ,	ಸಂಖ್ಯೆ	1	–	1	–
2) ರಾಮಾಪುರದಿಂದ ಸಿಂಗಾರಕೊಪ್ಪರಸ್ತೆ ನಿರ್ಮಾಣ (4 ಕಿಮಿ 5.00 ಲಕ್ಷ)	ಸಂಖ್ಯೆ	1	–	1	–
3) ಹಂಚಿನಾಳ-ಕಣಕಿಕೊಪ್ಪ ರಸ್ತೆ ನಿರ್ಮಾಣ (2 ಕಿ ಮಿ 4.00 ಲಕ್ಷ)	ಸಂಖ್ಯೆ	1	–	–	–
4) ಗೊವಿನಕೊಪ್ಪದಿಂದ ಕಗದಾಳ ರಸ್ತೆ ನಿರ್ಮಾಣ (3 ಕಿಮಿ 6.00 ಲಕ್ಷ)	ಸಂಖ್ಯೆ	1	–	–	–
5) ಹಂಚಿನಾಳದಲ್ಲಿ ಸಮುದಾಯ ಭವನ ನಿರ್ಮಾಣ (5.00 ಲಕ್ಷ)	ಸಂಖ್ಯೆ	1	–	–	–
6) ಚಿಕ್ಕುಂಬಿಯಲ್ಲಿ ಸಮುದಾಯ ಭವನ ನಿರ್ಮಾಣ (5.00 ಲಕ್ಷ)	ಸಂಖ್ಯೆ	1	–	–	–
7) ರಾಮಾಪೂರದಲ್ಲಿ ಸಮುದಾಯ ಭವನ ನಿರ್ಮಾಣ (4.00 ಲಕ್ಷ)	ಸಂಖ್ಯೆ	1	–	–	–
8) ಹೊಸೂರದಲ್ಲಿ ಸಮುದಾಯ ಭವನ ನಿರ್ಮಾಣ (5.00 ಲಕ್ಷ)	ಸಂಖ್ಯೆ	1	–	–	–

9) ಬೇವಿನಕೊಪ್ಪದಿಂದ ನೇಗಿನಾಳ ರಸ್ತೆ ಸುಧಾರಣೆ (7 ಕಿಮಿ 9.00 ಲಕ್ಷ)	ಸಂಖ್ಯೆ	-	1	-	-
10) ಕೆಂಗಾನೂರದಲ್ಲಿ ಸಮುದಾಯ ಭವನ ನಿರ್ಮಾಣ	ಸಂಖ್ಯೆ	-	1	-	-
		(ಬ) ಕಾಡಾ ಅನುದಾನದಲ್ಲಿ			
11) ಮುದ್ನೂರದಿಂದ ಜಾಲಿಕಟ್ಟೆ ರಸ್ತೆ ನಿರ್ಮಾಣ (1 ಕಿಮಿ 1.80 ಲಕ್ಷ)	ಸಂಖ್ಯೆ	1	-	-	-
12) ಸವದತ್ತಿಯಿಂದ ಸಂಗ್ರೇಶಕೊಪ್ಪ ರಸ್ತೆ ನಿರ್ಮಾಣ (1 ಕಿಮಿ 2.20 ಲಕ್ಷ)	ಸಂಖ್ಯೆ	1	-	-	-

---

ವಿಷಯ : ಪಂಚಾಯತ್ ಕಾನೂನಿನ್ವಯ ಅಧ್ಯಕ್ಷ ಉಪಾಧ್ಯಕ್ಷ ಹಾಗೂ ಸದಸ್ಯರಿಗೆ ತರಬೇತಿ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 428 (431)

ಶ್ರಿ. ಡಿ. ಆರ್ ಪಾಟೀಲ್ (ಗದಗ್):- ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ನೂತನ ಪಂಚಾಯತ್ ರಾಜ್ ಕಾನೂನಿನನ್ವಯ ಅಧಿಕಾರಕ್ಕೆ ಬಂದಿರುವ ಕೆಲವು ಜನ ಅಧ್ಯಕ್ಷ ಉಪಾಧ್ಯಕ್ಷರು ಅನಕ್ಷರಸ್ಥರಿದ್ದು, ಅವರಿಗೆಲ್ಲ ತಮ್ಮ ಅಧಿಕಾರ ಹಾಗೂ ಜವಾಬ್ದಾರಿಗಳನ್ನು ತಿಳಿಸಿಕೊಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ?

ಆ) ಪಂಚಾಯಿತಿಗಳ ನೂತನ ಸದಸ್ಯರಿಗೆ ಅವರ ಹೊಣೆಗಾರಿಕೆ ತಿಳಿಸಿಕೊಡಲು ಸರ್ಕಾರ ತರಬೇತಿ ನೀಡಲು ಕ್ರಮ ಕೈಗೊಂಡಿದೆಯೇ ಒಂದು ವೇಳೆ ಕ್ರಮ ಕೈಗೊಂಡಿರದಿದ್ದರೆ ಸರ್ಕಾರ ಈ ದಿಶೆಯಲ್ಲಿ ಯಾವ ಕ್ರಮ ಕೈಗೊಳ್ಳಲಿದೆ (ವಿವರಗಳನ್ನೊದಗಿಸುವುದು)

ಶ್ರೀ. ಎಂ. ವೀರಪ್ಪಮೊಯಿಲಿ (ಮುಖ್ಯ ಮಂತ್ರಿಗಳು):-

ಅ) ಹೊಸದಾಗಿ ಚುನಾಯಿತರಾಗಿ ಬಂದಿರುವ ಅಧ್ಯಕ್ಷ, ಉಪಾಧ್ಯಕ್ಷ ಹಾಗೂ ಸದಸ್ಯರಿಗೆ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಅವರ ಕರ್ತವ್ಯ ಹಾಗೂ ಜವಾಬ್ದಾರಿಗಳ ಬಗ್ಗೆ ಎಲ್ಲಾ ಜಿಲ್ಲಾ ಪಂಚಾಯತ್‌ಗಳು ತರಬೇತಿ ನಡೆಸಬೇಕೆಂದು ಸರ್ಕಾರ ತನ್ನ ದಿನಾಂಕ : 8-4-1994 ರ ಸುತ್ತೋಲೆಯಲ್ಲಿ ತಿಳಿಸಿದೆ.

ಆ) - ಈ ಪ್ರಕಾರ ಎಲ್ಲಾ ಜಿಲ್ಲಾ ಪಂಚಾಯ್ತಿಗಳು ತರಬೇತಿ ಶಿಬಿರಗಳನ್ನು ನಡೆಸುತ್ತಿವೆ.